ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ, ಸಿ.ಎಂ.ಸಿ. ರಸ್ತೆ ಯಲಹಂಕ ಹಳೇನಗರ ಬೆಂಗಳೂರು-64

ಸಂಖ್ಯೆ:ಬೃ.ಬೆಂ.ಮ.ಪಾ/ಕಾ.ಪಾ.ಅ/ಯ.ವಿ /ಅ.ಅ/ 66 /2019-20 ದಿನಾಂಕ: 07-11-2019

ಆಡಳಿತಾತ್ಮಕ ಅನುಮೋದನೆ ಟಿಪ್ಪಣಿ

ವಿಷಯ :- "Asphalting to Bestcounty -II and surrounding areas in ward no -03 Yelahanka Satellite Town sub Division" Est Cost:200.00Lakhs

ಉಲ್ಲೇಖ:- 1) ಮುಖ್ಯ ಲೆಕ್ಕಾಧಿಕಾರಿ ರವರ ಕಛೇರಿ ಕಾಮಗಾರಿ ಸಂಕೇತ:003-20-000081
2) ಮೂಲ ಕಡತದ ಕಂಡಿಕೆ(10)ರಲ್ಲಿ ಮಾನ್ಯ ಆಯುಕ್ತರು ಆಡಳಿತಾತ್ಮಕ ಅನುಮೋದನೆ ದಿನಾಂಕ:24-10-2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ ಉಪನಗರ ಉಪ ವಿಭಾಗ) ರವರು 2018-19ನೇ ಸಾಲಿನ **"ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆಯ 110 ಹಳ್ಳಿಗಳ ರಸ್ತೆಗಳ ಅಭಿವೃದ್ಧಿಗಾಗಿ ಅನುಬಂಧ-7ರಲ್ಲಿ** ಮಂಜೂರಾಗಿರುವ ಕಾಮಗಾರಿಯನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ವಯ ಮೇಲ್ಕಂಡ ಕಾಮಗಾರಿಗೆ **ರೂ.200.00ಲಕ್ಷಗಳಿಗೆ** ಅಂದಾಜುಪಟ್ಟಿ ತಯಾರಿಸಿದ್ದು, ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತ **003-20-000081** ದೊರೆತ್ತಿರುತ್ತದೆ.

ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಸರ್ಕಾರದ ಆದೇಶ **ಸಂಖ್ಯೆ:ನಅಇ 250 ಎಂಎನ್‌ವೈ 2019, ಬೆಂಗಳೂರು ದಿನಾಂಕ:15-10-2019ರಲ್ಲಿ** ಅನುಮೋದಿಸಲಾಗಿರುವ ರೂ.2.00 ಕೋಟಿಗಳಿಗಿಂತ ಕಡಿಮೆ ಮೊತ್ತದ ಮತ್ತು ತುರ್ತು ಕಾಮಗಾರಿಗಳೆಂದು ಬಿ.ಬಿ.ಎಂ.ಪಿ.ಯಿಂದ ನಿಯಮಾನುಸಾರ ನಿರ್ಧರಿಸಿ ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಕಾಮಗಾರಿಗಳಿಗೆ ಸೀಮಿತವಾಗಿ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಅಧಿಕಾವನ್ನು ಬಿ.ಬಿ.ಎಂ.ಪಿ ಮಾನ್ಯ ಆಯುಕ್ತರಿಗೆ ಪ್ರತ್ಯಾಯೋಜಿಸಿ ಆದೇಶಿಸಿದ್ದು, ಅದರಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವು ಮಾನ್ಯ ಆಯುಕ್ತರವರಿಗೆ ಇರುವುದರಿಂದ ಕಡತವನ್ನು ಮಾನ್ಯ ಆಯುಕ್ತರಿಗೆ ಸಲ್ಲಿಸಲಾಗಿದ್ದು, ಉಲ್ಲೇಖ(2)ರಂತೆ ಮಾನ್ಯ ಆಯುಕ್ತರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಆದುದರಿಂದ ಈ ಕೆಳಕಂಡ ಷರತ್ತುಗಳಂತೆ ಆಡಳಿತಾತ್ಮಕ ಅನುಮೋದನೆಯನ್ನು ಪುಟಸಂಖ್ಯೆ. 194 ಕ್ರ.ಸಂ. 66 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಷರತ್ತುಗಳು:-

1. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ಧಗೊಳಿಸುವುದು.
2. ಧರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ಧರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
3. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
4. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
6. ಬಿ.ಎಂ./ಬಿ.ಸಿ. ಅಳವಡಿಸಿಕೊಂಡಿರುವ ರಸ್ತೆಗಳಿಗೆ ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಪಡೆದುಕೊಳ್ಳುವುದು.
7. ಸದರಿ ಕೆಲಸವು ಎಂಬ್ಯಾಕ್‌ಮೆಂಟ್/ಕಾಂಕ್ರೀಟ್/ಡಾಂಬರೀಕರಣ-ಬಿಎಂ-ಬಿಸಿ/WMM-WBM ಕಾಮಗಾರಿಗಳಾಗಿದ್ದಲ್ಲಿ, MORT & H ಅನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದುಕೊಳ್ಳುವುದು.

ಕಾರ್ಯಪಾಲಕ ಅಭಿಯಂತರರು,
ಯಲಹಂಕ ವಿಭಾಗ,
ಬೃ.ಬೆಂ.ಮ.ಪಾ. ಬೆಂಗಳೂರು-64

ಪ್ರತಿಯನ್ನು:

1. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರ ಮಾಹಿತಿಗಾಗಿ.
2. ಮುಖ್ಯ ಲೆಕ್ಕಾಧಿಕಾರಿಗಳು ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3.

Scanned with CamScanner